ಎಂ.ವಿ.ಸಿ. 597/2023, ಆರ್.ಡಬ್ಲೂ.3 ಹೆಸರುಃ ಶರತ್‌ಬಾಬು

**ದಿಃ17-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 4 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಕೆ.ಎ.17/ಟಿ.ಇ.0520 ರ ಟ್ರೈಲರ್‌ಗೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಎಸ್.ಎಸ್. ವಕೀಲರಿಂದ**

2. ಅಪಘಾತವು ಕೆ.ಎ.17-ಟಿ.ಇ.-0520 ರ ಟ್ರೈಲರ್‌ನ ಚಾಲಕನ ಅಜಾಗರೂಕತೆಯಿಂದ ಅಪಘಾತ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ಟ್ರೈಲರ್‌ನ್ನು ರಸ್ತೆಯ ಮಧ್ಯಭಾಗದಲ್ಲಿ ಯಾವುದೇ ಮುಂಜಾಗ್ರತ ಕ್ರಮವನ್ನು ತೆಗೆದುಕೊಳ್ಳದೆ ನಿಲ್ಲಿಸಿದ್ದರ ಪರಿಣಾಮ ಅಪಘಾತ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ಮಾರುತಿ ಓಮಿನಿ ವಾಹನದ ಚಾಲಕನ ತಪ್ಪಿನಿಂದ ಏರ್ಪಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ವಿಮಾ ಪರಿಹಾರವನ್ನು ಪಾವತಿಸಲು 4 ನೇ ಎದುರುದಾರರೆ ಬಾದ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಅರ್ಜಿದಾರರ ಶ್ರೀ ಕೆ.ಇ.ಸಿ.. ವಕೀಲರಿಂದ**

3. ಅಪಘಾತದ ಸಮಯದಲ್ಲಿ ಟ್ರೈಲರ್‌ನಲ್ಲಿ ಬತ್ತದ ಹುಲ್ಲನ್ನು ಲೋಡ್ ಮಾಡಲಾಗಿತ್ತು ಎಂದರೆ ಸರಿ. ಹಾಗಾಗಿ ಬತ್ತದ ಹುಲ್ಲು ಟ್ರೈಲರ್‌ನ ಎರಡೂ ಕಡೆಗೂ ಚಾಚಿಕೊಂಡು ಅಗಲ ಇರುತ್ತದೆ ಎಂದರೆ ಸರಿ. ಟ್ರೈಲರ್‌ನ್ನು ರಸ್ತೆಯಲ್ಲಿ ನಿಲ್ಲಿಸಿದ್ದು, ಹಾಗಾಗಿ ಸದರಿ ರಸ್ತೆ ಏಕಮುಖವಾಗಿದ್ದ ಕಾರಣ ಸಂಪೂರ್ಣ ರಸ್ತೆಗೆ ಹೊಂದಿಕೊಂಡಂತೆ ಇತ್ತು ಎಂದರೆ ಸರಿ. ಟ್ರೈಲರ್‌ಗೆ ಸಂಬಂಧಿಸಿದಂತೆ ಯಾವುದೇ ಸೂಚನಾ ಫಲಕವನ್ನು ಮತ್ತು ಇಂಡಿಕೇಟರ್‌ನ್ನು ಹಾಕಿರಲಿಲ್ಲ ಎಂದರೆ ಸರಿ. ಅಪಘಾತ ರಾತ್ರಿ 8.30 ರ ಸಮಯದಲ್ಲಿ ಏರ್ಪಟ್ಟಿದ್ದು, ಕತ್ತಲಾಗಿತ್ತು ಎಂದರೆ ಸರಿ. ಹಾಗಾಗಿ ಟ್ರೈಲರ್‌ನ ಚಾಲಕನ ಅಜಾಗರೂಕತೆಯಿಂದ ಅಪಘಾತ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ. ಟ್ರೈಲರ್‌ನ ಚಾಲಕನ ವಿರುದ್ಧವೂ ಸಹ ತನಿಖಾಧಿಕಾರಿಗಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಹಾಗಾಗಿ 4 ನೇ ಎದುರುದಾರರು ಸಹ ಪರಿಹಾರವನ್ನು ಪಾವತಿಸಲು ಬಾದ್ಯಸ್ಥರಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ